ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಮಲಪ್ರಭ ನೀರಿನ ಕೊಳವೆಗಳು ಒಡೆದು ಹೋಗಿರುವುದು

ಶ್ರೀ ಅಶೋಕ ಕಾಟ್ವೆ : ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನದಲ್ಲಿಯೂ ಸಹ ನಾನು ಈ ಒಂದು ಹುಬ್ಬಳ್ಳಿ ಮತ್ತು ಧಾರವಾಡ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಎಂಟು ದಿವಸಕ್ಕೆ ಒಂದು ಸಾರಿ ನೀರು ಬಿಡುತ್ತಿದ್ದಾರೆ. ಮಲಪ್ರಭಾನದಿಯಿಂದ ಬರುವಂತಹ ನೀರಿನ ಕೊಳವೆಗಳು ತೂತು ಬಿದ್ದು ಸೋರುತ್ತಿವೆ. ಆದ್ದರಿಂದ ಕುಡಿಯುವ ನೀರು ಸಮರ್ಪಕವಾಗಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪ-ಮುಖ್ಯಮಂತ್ರಿಗಳು) : ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರಿನ ಸುತ್ತಮುತ್ತಲ ಜಮೀನನ್ನು ಕೆಲವು ಪ್ರಭಾವಿ ವ್ಯಕ್ತಿಗಳು ವಶಪಡಿಸಿಕೊಳ್ಳುತ್ತಿರುವುದು

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಕಂದಾಯ ಇಲಾಖೆ ಮತ್ತು ಬಿ.ಡಿ.ಎ. ವ್ಯಾಪ್ತಿಯಲ್ಲಿ ಬರತಕ್ಕಂಥ ಅನೇಕ ಸಾರ್ವಜನಿಕ ಕೆಲಸಗಳಿಗೆ ಮೀಸಲಾಗಿಟ್ಟಿರುವಂತಹ ಜಮೀನುಗಳು ಕೂಡ ಸಾಕಷ್ಟು ಇವೆ. ನಾನು ಕಳೆದ 6 ತಿಂಗಳ ಹಿಂದೆ ಈ ವಿಷಯವನ್ನು ಪ್ರಶ್ನೆಯ ಮೂಲಕ ಈ ಸದನದಲ್ಲಿ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಅನಧಿಕೃತವಾಗಿ ಕಟ್ಟುತ್ತಾ ಇರತಕ್ಕಂಥ ಯಾವುದೇ ಕಟ್ಟಡಗಳು ಆಗಲಿ ಅದೂ ಸಾರ್ವಜನಿಕ ಉದ್ದೇಶಕ್ಕೆ ಮೀಸಲಾಗಿಟ್ಟಿರತಕ್ಕಂಥ ಪ್ರದೇಶದಲ್ಲಿ ಕಟ್ಟುತ್ತಿರುವಂತಹ ಕಟ್ಟಡಗಳು ಸರ್ಕಾರದ ಗಮನಕ್ಕೆ ಬಂದಿದೆ ಅವುಗಳನ್ನು ತೆರವು ಮಾಡಿಸುತ್ತೇನೆ ಎನ್ನುವಂತಹ ಆಶ್ವಾಸನೆಯನ್ನು ಮಾನ್ಯ ಬಿ.ಡಿ.ಎ. ಸಚಿವರು ಕೊಟ್ಟಿದ್ದರು. ಅದೇ ಪ್ರಶ್ನೆಯನ್ನು ನಾನು ಇವತ್ತು ಕೇಳಬೇಕಾಗುತ್ತದೆ. ನಾನು ಇಲ್ಲಿ ಎರಡು ಮೂರು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತಿದ್ದೇನೆ. ಸರ್ವೆ ನಂಬರು 41, ಗೆದ್ದಲಹಳ್ಳಿಯಲ್ಲಿ ಬರುತ್ತದೆ. ಇದು ಶಾಲೆಗೋಸ್ಕರ ಮೀಸಲಾಗಿಟ್ಟಿರತಕ್ಕಂಥ ಜಾಗ. ಅಲ್ಲಿ ಆಟವಾಡುವುದಕ್ಕೂ ಜಾಗ ಇಲ್ಲ. ಅಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ್ ಬರುತ್ತಿವೆ. ಅಲ್ಲಿ 5 ಗುಂಟೆ ಜಮೀನು ಇದೆ. ಪೂರ್ತಿ ಕಟ್ಟಡ ಬರುತ್ತಿದೆ. ನಮ್ಮ ಮಾನ್ಯಮಂತ್ರಿಗಳು ಆ ಜಾಗದ ಪಕ್ಕದಲ್ಲಿಯೇ ಅವರ ಕಟ್ಟಡಕ್ಕೆ ಹೋಗಬೇಕಾಗುತ್ತದೆ. ಅದನ್ನು ತೆರವು ಮಾಡಿಸುವಂತಹ ಕೆಲಸ ಇದುವರೆಗೂ ಮಾಡಿಲ್ಲ.

3.40 ಪಿ.ಎಂ

ಈ ಕುರಿತು ಸದನದಲ್ಲಿ ಉತ್ತರ ಕೊಡುವಂಥ ಸಂದರ್ಭದಲ್ಲಿ ತೆರವು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದೇ ರೀತಿಯಾಗಿ ಸರ್ವೇ ನಂಬರ್ 32ರಲ್ಲಿ, ಪಿ.ಅಂಡ್.ಟಿ. ಕಾಲನಿಯಲ್ಲಿ ಸುಮಾರು 12,000 ಚದರ ಅಡಿ ಇರತಕ್ಕಂಥ ಒಂದು ಜಾಗದಲ್ಲಿ ಒಂದು ಕಮರ್ಷಿಯಲ್ ಕಾಂಪ್ಲೆಕ್ಸ್ ಬರುತ್ತಾ ಇದೆ. ಅದರಲ್ಲಿ ಯಾವುದೇ ತಡೆಯಾಜ್ಞೆಯಾಗಲೀ, ಇನ್ನಾವುದೇ ಇಲ್ಲದಿರತಕ್ಕಂಥ ಸಂದರ್ಭದಲ್ಲಿ ಅದನ್ನು ಯಾವರೀತಿಯಲ್ಲಿ ಖುಲಾಸೆ ಮಾಡುತ್ತೀರಿ ಎಂದು ಗೊತ್ತಿಲ್ಲ ಅದಕ್ಕೆ ತಾವುಗಳು ಒಂದು ಉತ್ತರವನ್ನು ಕೂಡ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಸರ್ವೇ ನಂಬರ್ 65:6 - ನಾಗಶೆಟ್ಟಿಹಳ್ಳಿಯಲ್ಲಿ ಇರತಕ್ಕಂಥಾದ್ದು ಅದನ್ನು ಸಿವಿಕ್ ಅಮಿನಿಟೀಸ್‌ಗಾಗಿ ಮೀಸಲು ಇಟ್ಟಿರತಕ್ಕಂಥ ಒಂದು ಜಾಗ.